# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2490 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23-03-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಚತುಷ್ಪಥ ರಸ್ತೆಯ ನಿರ್ಮಾಣಕ್ಕೆ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಭೂಸ್ವಾಧೀನ ಮಾಡಿಕೊಂಡ ಪ್ರಕರಣಗಳು ಯಾವುವು; | ರಾಷ್ಟ್ರೀಯ ಹೆದ್ದಾರಿ-66ರ ಹೆದ್ದಾರಿಯು ಗೋವಾ-ಕರ್ನಾಟಕ ಗಡಿಯಿಂದ ತಲಪಾಡಿ ಗಡಿ ಭಾಗದವರೆಗೆ ಇದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಸುಪರ್ದಿಯಲ್ಲಿರುತ್ತದೆ. ಸದರಿ ಹೆದ್ದಾರಿಯ ಚತುಷ್ಪಥ ರಸ್ತೆಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.<br>ಸದರಿ ಕಾಮಗಾರಿಯ ಅನುಮೋದಿತ Detailed Project Report ಮತ್ತು ಕರಾರು ಒಪ್ಪಂದದಲ್ಲಿನ ನಿಬಂಧನೆಗಳನ್ವಯ ಭೂಸ್ವಾಧೀನವನ್ನು ಕೈಗೊಳ್ಳಲಾಗಿದೆ. ಮುಂದುವರೆದು, ಕೆಲವು ಭಾಗಗಳಲ್ಲಿ ಇಳಿಜಾರು ಸ್ಥಿರತೆ ಮತ್ತು ಸುರಕ್ಷತೆಯನ್ನು ಹೊಂದಲು ಎತ್ತರಕ್ಕಿಂತ ಕತ್ತರಿಸುವಿಕೆ (cutting) ಮತ್ತು ತುಂಬುವಿಕೆ (Filling) ಅವಶ್ಯವಿದ್ದು ಈ ಭಾಗಗಳಲ್ಲಿ ಹೆಚ್ಚುವರಿಯಾಗಿ ಅರಣ್ಯ ಮತ್ತು ಇತರೆ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. |
| ಆ) | ಈ ಭೂಸ್ವಾಧೀನದಲ್ಲಿ ಪಟ್ಟಾ ಜಮೀನಿನ 90% ಭೂಸ್ವಾಧೀನ ಪಡೆದುಕೊಂದು ಬಾಕಿಯುಳಿದ 10% ಜಮೀನು ಜಮೀನುದಾರರಿಗೆ ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಪ್ರಕರಣಗಳಲ್ಲಿ ಸಂಪೂರ್ಣ ಭೂಸ್ವಾಧೀನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಈ ಕುರಿತಂತೆ ಯಾವುದೇ ಪ್ರಕರಣಗಳು ಇರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ವರದಿಸಿರುತ್ತಾರೆ. |
| ಇ) | ಭೂಸ್ವಾಧೀನವಾದರೂ ಸಮೀಪ ರಸ್ತೆ ನಿರ್ಮಾಣ ಮಾಡದ ಕಾಮಗಾರಿಗಳು ಯಾವುವು (ಕಿಮೀ ವಹಿ ಮಾಹಿತಿ ನೀಡುವುದು) | ಸದರಿ ಕಾಮಗಾರಿಯ ಕರಾರು ಒಪ್ಪಂದದಂತೆ ಹೆದ್ದಾರಿಯ ಅಗಲೀಕರಣ, ಸರ್ವಿಸ್ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br>ಮುಂದುವರೆದು, ರಾಜ್ಯ ಸರ್ಕಾರದ ವಿನಂತಿಯನ್ನು ಆಧರಿಸಿ ಮತ್ತು ಸದರಿ ಹೆದ್ದಾರಿಯ ಉದ್ದಕ್ಕೂ ಅಸ್ತಿತ್ವದಲ್ಲಿರುವ ವಸತಿ/ ಅಭಿವೃದ್ಧಿಯನ್ನು ಪರಿಗಣಿಸಿ ಈ ಕೆಳಕಂಡ ಭಾಗಗಳಲ್ಲಿ ಪ್ರಸ್ತಾಪಿತ ROW ಯನ್ನು ಕಡಿತಗೊಳಿಸಲಾಗಿದೆ.<br>1) ಅವರ್ಸ (ಕಿಮೀ 128.600 ಯಿಂದ 130.00=1.4 ಕಿಮೀ)<br>2) ಹೈದಿಪುರ್ (ಕಿಮೀ 183.700 ಯಿಂದ 185.750=2.05 ಕಿಮೀ)<br>3) ಕರ್ಕಿ (ಕಿಮೀ 187.800 ಯಿಂದ 189.380=1.50 ಕಿಮೀ)<br>4) ಹೊನ್ನವರ (ಕಿಮೀ 192.650 ಯಿಂದ 193.600=0.95 ಕಿಮೀ)<br>5) ಶಿರಾಳಿ (ಕಿಮೀ 224.730 ಯಿಂದ 225.800=1.070 ಕಿಮೀ)<br>6) ಭಟ್ಕಳ್(ಕಿಮೀ 227.540 ಯಿಂದ 230.647=3.107 ಕಿಮೀ) |

| | | |
|---|---|---|
| ಈ) | ಬ್ರಹ್ಮಾವರದ ಆಕಾಶವಾಣಿ ಬಳಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವು ಅವೈಜ್ಞಾನಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸದರಿ ಹೆದ್ದಾರಿಯ ಬ್ರಹ್ಮಾವರ ಹಾಗೂ ಆಕಾಶವಾಣಿ ಭಾಗದಲ್ಲಿ ಕಾಮಗಾರಿಯನ್ನು ಕರಾರು ಒಪ್ಪಂದಂತೆ ಕೈಗೊಳ್ಳಲಾಗಿದೆ. ಮುಂದುವರೆದು ವಾಹನ ಸವಾರರ ಸ ನುರಕ್ಷತೆಗಾಗಿ ಸುರಕ್ಷತಾ ಕ್ರಮಗಳಾದ ಸೈನ್ ಬೋರ್ಡ್, ರೋಡ್ ಮಾರ್ಕಿಂಗ್ ಲೈಟ್ಸ್, ಸ್ಟಡ್ ಹಾಗೂ ಇತರೆ ಸುರಕ್ಷತಾ ಕ್ರಮಗಳನ್ನು ಈ ಭಾಗದಲ್ಲಿ ಕೈಗೊಳ್ಳಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 120 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು